
# ಸೂರದಾಸ

ತಮಿಳು ಮೂಲ : ಭವತಾರಿಣಿ
ಕನ್ನಡಕ್ಕೆ : ರಾಘವೇಶಾನಂದ
ಚಿತ್ರ : ಮಣಿಯನ್ ಸೆಲ್ವಂ





ಸೂರದಾಸನು ಶ್ರೀಕೃಷ್ಣನ ದರ್ಶನಕ್ಕಾಗಿ ಹಾತೊರೆಯುತ್ತಿದ್ದ. ಇದು ಕೃಷ್ಣನಿಗೆ ತಿಳಿಯಿತು.
7
ರಾಧಾ, ಅವನ ಬಳಿಗೆ ಹೋಗಬೇಡ. ಅವನು ನಿನ್ನ ಪಾದಗಳನ್ನು ಹಿಡಿದುಕೊಂಡು ಬಿಡುವನು.
ನೋಡೋಣ.
ರಾಧೆ ಸೂರದಾಸನ ಹತ್ತಿರ ಹೋದಳು.
8
ನೀನು ನನ್ನ ಕಾಲನ್ನು ಹಿಡಿದು ಕೊಳ್ಳುವೆಯಾ?
ಅಮ್ಮ, ನಾನು ಕುರುಡ. ಅದು ಹೇಗೆ ಸಾಧ್ಯ?
ರಾಧೆ ಮೆಲ್ಲನೆ ಅವನ ಹಿಂದೆ ಹೋಗಿ ಅವನನ್ನು ಮುಟ್ಟಿದಳು.
9
ರಾಧಾ, ಜೋಪಾನ. ಅವನು ನಿನ್ನನ್ನು ಹಿಡಿದುಬಿಡಬಹುದು.
ಓ, ಹಾಗೋ! ನೀನು ನನ್ನ ಹಿಂದೆ ನಿಂತಿರುವೆಯಾ?
ಅವನು ಹಟಾತ್ ಹಿಂದಕ್ಕೆ ತಿರುಗಿ ರಾಧೆಯ ಕಾಲುಗಳನ್ನು ಹಿಡಿದನು. ರಾಧೆ ಹೇಗೊ ತಪ್ಪಿಸಿಕೊಂಡಳು. ಆದರೆ ಅವಳ ಕಾಲ್ಗೆಜ್ಜೆಗಳು ಅವನ ಕೈಯಲ್ಲೇ ಉಳಿದವು.
10
ದಯವಿಟ್ಟು ಆ ಗೆಜ್ಜೆಗಳನ್ನು ಕೊಡು. ಅವು ಕೃಷ್ಣನಿಗೆ ತುಂಬಾ ಪ್ರಿಯ.
11
ಅವು ನಿನ್ನವೇ? ನನಗೇನು ಗೊತ್ತು? ನಾನು ಕುರುಡ.



ಖಂಡಿತ ಅವು ನನ್ನವು. ದಯವಿಟ್ಟು ಹಿಂದಿರುಗಿಸು.
12
ನಾನು ನಿನ್ನನ್ನು ನೋಡಲು ಸಾಧ್ಯವಾದುದೇ ಆದರೆ ಅವು ನಿನ್ನವೆಂದು ನಂಬುತ್ತೇನೆ.
ಮರುಕ್ಷಣವೇ ಸೂರದಾಸನಿಗೆ ದೃಷ್ಟಿ ಬಂದಿತು. ರಾಧೆ ಮತ್ತು ಕೃಷ್ಣ ತನ್ನ ಮುಂದೆ ನಿಂತಿರುವುದನ್ನು ಅವನು ಕಂಡನು.
ನಿನಗೆ ಬೇಕಾದ ವರವನ್ನು ಕೇಳು.
13
ಆದರೆ, ನಿಮಗೆ ಅದನ್ನು ಕೊಡಲಾಗದು.
ಇಲ್ಲ, ನಾವು ಎಂದಿಗೂ ತಿರಸ್ಕರಿಸುವುದಿಲ್ಲ.
ನಿಜವಾಗಿ?
14
ಹೌದು!
ನಿಮ್ಮಿಬ್ಬರ ದಿವ್ಯ ರೂಪಗಳನ್ನು ನನ್ನ ಕಣ್ಣುಗಳಿಂದ ನೋಡಿದ ಮೇಲೆ, ಈ ಜಗತ್ತಿನಲ್ಲಿ ಮತ್ತೇನನ್ನೂ ನೋಡಲು ಇಚ್ಛಿಸೆನು. ಆದ್ದರಿಂದ ದಯವಿಟ್ಟು ನನ್ನನ್ನು ಮತ್ತೆ ಕುರುಡನನ್ನಾಗಿ ಮಾಡಿ.
15
ಸೂರದಾಸನ ಭಕ್ತಿಯನ್ನು ನೋಡಿ ರಾಧೆಯ ಕಣ್ಣಿನಲ್ಲಿ ನೀರು ಬಂದಿತು. ಅವನು ಮತ್ತೆ ಕುರುಡನಾದನು.